

# ಬೆಕ್ಕು ಅಡ್ಡ ಬಂದರೆ ಅಪಶಕುನ!

ಬೆಕ್ಕು ನಮ್ಮ ಮಂತ್ರಿಗಳಿಗಿಂತಲೂ ಸೋಮಾರಿಯಾದ ಪ್ರಾಣಿ. ಇವರಿಗಿಂತಲೂ ಹೆಚ್ಚಿನ ಸಮಯವನ್ನು ಅದು ನಿದ್ರೆಯಲ್ಲಿ ಕಳೆಯುತ್ತದೆ. ಒಂದು ಅಂದಾಜಿನ ಪ್ರಕಾರ ಅದು ದಿನಕ್ಕೆ ಹದಿನಾರು ಗಂಟೆಗಳ ಕಾಲ ನಿದ್ರಿಸುತ್ತದೆ. ಅದು ಓಡುವುದು ಎರಡೇ ಕಾರಣಗಳಿಂದ – ಹಸಿವಾಗಿದ್ದಾಗ ಬೇಟೆಯಾಡಲು ಮತ್ತು ಅದರ ಪ್ರಾಣಕ್ಕೆ ಅಪಾಯ ಒದಗಿದಾಗ.

ಭಾರತ ಹಳ್ಳಿಗಳ ದೇಶ (ಈಗ ಹಳ್ಳಗಳ ದೇಶವೆನ್ನುತ್ತಾರೆ; ಆ ಮಾತು ಅಂತಿರಲಿ). ಅಂದಿನ ಕಾಲದಲ್ಲಿ ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಹೋಗಲು ಅರಣ್ಯ, ಗುಡ್ಡಗಾಡುಗಳ ಮೂಲಕ ಕಾಲುದಾರಿಯಲ್ಲಿ ಸಾಗುವುದು ಸರ್ವೇಸಾಮಾನ್ಯವಾಗಿತ್ತು. ಹೀಗೆ ಹೊರಟಾಗ ಬೆಕ್ಕು ಅಡ್ಡ ಬಂದರೆ ಒಂದು ನಿಮಿಷ ನಿಂತು ಅಥವಾ ಕೊಂಚ ಹಿಂದಕ್ಕೆ ಬಂದು ನಂತರ ಮುಂದೆ ಚಲಿಸುತ್ತಿದ್ದರು.

ಬೆಕ್ಕು ಅದರ ಬೇಟೆಯನ್ನು ಕಂಡು, ಅದನ್ನು ಹಿಂಬಾಲಿಸಿದ್ದರೆ ಇವರಿಗೇನೂ ಅಪಾಯವಿರುತ್ತಿರಲಿಲ್ಲ; ಆದರೆ ಬೆಕ್ಕನ್ನೇ ಯಾವುದಾದರೂ ತೋಳವೋ, ಬೇಟೆನಾಯಿಯೋ, ಅಟ್ಟಿಸಿಕೊಂಡು ಬರುತ್ತಿದ್ದು, ಬೆಕ್ಕು ತಪ್ಪಿಸಿಕೊಂಡು ಇವರು ಆ ಜಾಗದಲ್ಲಿ ಅದರ ಬಾಯಿಗೆ ತುತ್ತಾಗುವುದನ್ನು ತಪ್ಪಿಸುವ ಸಲುವಾಗಿ ಈ ವಿಧಿಗಳನ್ನು ಅಂದಿನ ಜನರು ಅನುಷ್ಠಾನಕ್ಕೆ ತಂದಿದ್ದರು. ಈಗ ಕಾಡುಗಳೂ ಇಲ್ಲದ, ಕಾಲುದಾರಿಗಳೂ ಇಲ್ಲದ ಪಟ್ಟಣ, ನಗರಗಳಲ್ಲಿ ಹೋಗುತ್ತಿರುವ ಬೈಕ್, ಕಾರ್‌ಗಳು ರಸ್ತೆಯಲ್ಲಿ ಬೆಕ್ಕು ಅಡ್ಡ ಬಂದರೆ ನಿಂತು ನಂತರ ಮುಂದೆ ಹೋಗುವುದು ಅನಗತ್ಯ, ಅವೈಜ್ಞಾನಿಕ ಹಾಗೂ ಹಾಸ್ಯಾಸ್ಪದ. ಈಗಿನ ವೇಗಯುಗದಲ್ಲಿ ರಭಸದಿಂದ ಸಾಗುತ್ತಿರುವ ವಾಹನಗಳಿಗೆ ಬೆಕ್ಕು ಅಡ್ಡ ಬಂದರೆ ಕೆಟ್ಟದಾಗುವುದು ನಮಗಲ್ಲ, ಬೆಕ್ಕಿಗೆ!

ಬೆಕ್ಕನ್ನು ಕೊಂದರೆ ಒಂದು ಚಿನ್ನದ ಬೆಕ್ಕನ್ನು ಮಾಡಿಸಿ, ದಾನ ಮಾಡಬೇಕು ಎಂಬ ನಂಬಿಕೆಯೂ ಇದೆ. ಇಲಿ, ಹೆಗ್ಗಣಗಳನ್ನು ತಿಂದು, ಮನೆಯ ದಾಸ್ತಾನನ್ನು ಕಾಯುವ ಬೆಕ್ಕನ್ನು ಕೊಂದರೆ ಮನೆಯಲ್ಲಿನ ಆಹಾರ ಪದಾರ್ಥಗಳು ಮೂಷಿಕಗಳಿಗೆ ಆಹಾರವಾಗಿ, ಮೂಟೆಗಟ್ಟಲೆ ಧಾನ್ಯ ವ್ಯರ್ಥವಾಗುವುದರಿಂದ, ಬೆಕ್ಕನ್ನು ಕೊಲ್ಲದಿರಲೆಂದು ಈ ರೀತಿಯ ಖರ್ಚಿನ ಭಯವನ್ನು ಹುಟ್ಟಿಹಾಕಿರಬೇಕಷ್ಟೆ. ಹಿಂದಿನ ದಿನಗಳಲ್ಲಿ ಹಾವನ್ನೂ ಕೊಲ್ಲದೆ ಅದಕ್ಕೆ ಪೂಜ್ಯಸ್ಥಾನ ನೀಡುತ್ತಿದ್ದುದು ಅದು ಕೂಡ ಹೊಲಗಳಲ್ಲಿನ ಮೂಷಿಕವರ್ಗವನ್ನು ಹಾಗೂ ಇತರ ಬೆಳೆ ಹಾಳುಮಾಡುವ ಪ್ರಾಣಿಗಳನ್ನು ಕಬಳಿಸುತ್ತಿದ್ದುದೇ ಕಾರಣ.

### ನರೀನ್ ಕಂಡ್ಯಾ ಸಿರೀನ್ ಕಂಡ್ಯಾ

ಇದಂತೂ ಒಂದು ವಿಚಿತ್ರವಾದ ನಂಬಿಕೆಯೇ ಸೈ. ಮನುಷ್ಯ ಬೆಳೆದಂತೆ, ನಾಲಿಗೆ ಹೊರಳಿದಂತೆ, ಹಲವಾರು ಗಾದೆಗಳು, ನುಡಿಗಟ್ಟುಗಳು ತಮ್ಮ ಮೂಲಸ್ವರೂಪ ಕಳೆದುಕೊಂಡು ಅರ್ಥಹೀನ ಅಥವಾ ಅವಹೇಳನಕರ ವಿಧಿ ಪಡೆದವು. ಬ್ರಾಹ್ಮಣೋ ಬಹುಜನಪ್ರಿಯಃ ಎಂಬುದು ಬ್ರಾಹ್ಮಣೋ ಭೋಜನಪ್ರಿಯಃ ಎಂದಾಗಿ, ಊಟಕ್ಕಿಲ್ಲದ ಉಪ್ಪಿನಕಾಯಿ ಶ್ರಾದ್ಧಕ್ಯಾಕೆ? ಎಂಬುದು ಹೇಳಲೂ ಅಸಹ್ಯವಾದ ರೀತಿಯಲ್ಲಿ ಅಪಭ್ರಂಶಗೊಂಡದ್ದು, 'gone to the docks' ಎಂಬುದು 'gone to the dogs' ಆದುದು ಸರ್ವವಿಧಿತವಾದಂತೆಯೇ ನರೀನ್ ಕಂಡ್ಯಾ ಎಂಬುದು ಮೂಲ ಝುರೀನ್ ಕಂಡ್ಯಾ ಎಂಬುದರ ರೂಪಾಂತರ!

ವಾಸ್ತವವಾಗಿ ನರಿಯು ಬೇರೆ ಪ್ರಾಣಿಗಳು ಕೊಂದು, ತಿಂದು, ಬಿಟ್ಟ ಅವಶೇಷಗಳನ್ನು ತಿಂದು ಬದುಕುವ ಪ್ರಾಣಿ. ನರಿಯನ್ನು ಹಿಂಬಾಲಿಸಿ ಹೋದರೆ ಹೆಚ್ಚೆಂದರೆ ಸತ್ತ ಪ್ರಾಣಿಗಳ ಮಾಂಸ ದೊರಕುತ್ತಿತ್ತಷ್ಟೆ. ಬೇರೆ ಪ್ರಾಣಿಗಳು ಎಂಜಲು ಮಾಡಿದ ವಸ್ತುಗಳನ್ನು ನಮ್ಮ ಪೂರ್ವಜರು ತಿನ್ನುತ್ತಿದ್ದರೆಂಬ ಸಂಗತಿ ನಿರಾಧಾರವಾದುದರಿಂದ, ಹಾಗೂ ನರಿಯಿಂದ ಇನ್ನಾವುದೇ ಉಪಯೋಗ ಮನುಷ್ಯನಿಗೆ ಇಲ್ಲದ್ದರಿಂದ, ನರಿಯಷ್ಟೇ ಅಲ್ಲ, ಯಾವುದೇ ಪ್ರಾಣಿಯ ಮುಖಕ್ಕೂ, ಮನುಷ್ಯನ ಅದೃಷ್ಟಕ್ಕೂ ಯಾವುದೇ ತಾಳೆ ಹಾಕುವುದು ಅಸಮಂಜಸ (ಇದು ನರಿಮೊಗದ ವ್ಯಕ್ತಿಗಳ ಕುರಿತ ಹೇಳಿಕೆಯಲ್ಲ!). ನರೀನ್ ಎಂಬುದು ಝುರೀನ್ ಎಂಬುದರ ಬದಲಿಗೆ ಬಂದುದು; ಝುರಿ ಎಂದರೆ ಮನೆಯಲ್ಲಿ ಹರಿದಾಡುವಂತಹ ಹುಳುವಲ್ಲ, ಝುರಿ ಎಂದರೆ ನೀರಿನ ತೊರೆ ಎಂಬರ್ಥದಲ್ಲಿ ಬಂದ ಮಾತಿದು. ಹರಿಯುವ ನೀರು ಸರ್ವಕಾಲಕ್ಕೂ ಅಮೂಲ್ಯವಾದ ಸಿರಿಯೇ ಆದ್ದರಿಂದ ಝುರಿಯೇ ಸಿರಿ ಎಂಬ ಅರ್ಥದಲ್ಲಿ ಈ ನುಡಿಗಟ್ಟು ರೂಪುಗೊಂಡಿದೆ.

### ಗೌಳೀಪತನಫಲ

ನಮ್ಮ ಪಂಚಾಂಗದ ಕೆಲವು ಅವೈಜ್ಞಾನಿಕ ಅಂಶಗಳಲ್ಲಿ ಇದೂ ಒಂದು. ವಾಸ್ತವವಾಗಿ ಯಾವುದೇ ಪ್ರಾಣಿ, ಪಕ್ಷಿ, ಕೀಟ ನಮ್ಮ ಮೇಲೆ ಆಕ್ರಮಣ ಮಾಡಿದರೆ, ಅಥವಾ ಮುಗಿಬಿದ್ದರೆ ನಾವು ಅಪ್ರತಿಭರಾಗುವುದು ಸಹಜ. ಹಲ್ಲಿ ಶೀತಲನೆತ್ತರಿನ ಪ್ರಾಣಿ. ಅದು ಮೈಮೇಲೆ ಬಿದ್ದಾಗ ಕಿರಿಕಿರಿಯಾಗುವುದು ನಿಜ. ಆದರೆ ಅದಕ್ಕೂ, ನಮ್ಮ ದೈನಂದಿನ ಚಟುವಟಿಕೆಗಳಿಗೂ ಯಾವುದೇ ಸಂಬಂಧವಿಲ್ಲ. 'ಕೇಶಾಂತೇ ಮೃತ್ಯುಭಯಂ ಎಂಬುದು ನಮಗಲ್ಲ ಹಲ್ಲಿಗೆ' ಎಂದಿದ್ದರು ಬೀಚಿ! ಹಲ್ಲಿಯ ಮೂತ್ರವು ಮೈಮೇಲೆ ಬಿದ್ದಾಗ ಉರಿ ಉಂಟಾಗುತ್ತದೆ; ಕೆಲವರಿಗೆ ಅಸಾಧ್ಯವಾದ ತುರಿಕೆ ಉಂಟಾಗುತ್ತದೆ ಎಂಬುದರ ಹೊರತಾಗಿ ಹಲ್ಲಿಯ ಪತನ (ಮಾಡಿಟ್ಟ ಆಹಾರದಲ್ಲಿ ಬೀಳಬಾರದೆಂಬುದು ನಿಜ) ಅಥವಾ ಲೊಚಗುಟ್ಟುವಿಕೆಗಳು ನಮ್ಮ ಜೀವನದ ಪಥಕ್ಕೆ ಯಾವುದೇ ವಿಧವಾದ ಹಾನಿ ಅಥವಾ ಪುಷ್ಟಿಗಳನ್ನು ತಂದೊಡ್ಡುವುದಿಲ್ಲ.

■ ವೈ–ಚಾರಿ